ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಾಸರಹಳ್ಳಿ ವಲಯ, 2ನೇ ಮತ್ತು 4ನೇ ಕ್ರಾಸ್ ರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್.ಎಂ.ಟಿ. ಬಡಾವಣೆ,
BWSSB Water Tank ಹತ್ತಿರ, ನಾಗಸಂದ್ರ (ಪೋ) ಬೆಂಗಳೂರು -560073

ಸಂಖ್ಯೆ:ಬಿಬಿಎಂಪಿ/ಕಾ.ಪಾ.ಅ/ದಾ.ವಿ/ತಾ.ಮ/45/2021-22

ಕಾರ್ಯಪಾಲಕ ಅಭಿಯಂತರವರ ಕಛೇರಿ
ದಾಸರಹಳ್ಳಿ ವಿಭಾಗ, ದಿನಾಂಕ: 13-01-2022

ತಾಂತ್ರಿಕ ಮಂಜೂರಾತಿ

ಕಾಮಗಾರಿಯ ಹೆಸರು:- Maintenance of Dasarahalli Zonal office in Bagalagunte Ward No 14

ಅಂದಾಜು ಮೊತ್ತ 20.00 ಲಕ್ಷಗಳು ಪಿ-0595

ಉಲ್ಲೇಖ ಸಂಖ್ಯೆ:
1. ಮಾನ್ಯ ಆಯುಕ್ತರವರು ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಕಛೇರಿ ಆದೇಶ (ತಿದ್ದುಪಡಿ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳು) ಪತ್ರಸಂಖ್ಯೆ:ಬಿ12(1)ಪಿಆರ್/394/20-21, ದಿ:04.02.2021
2. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ:ಕಾ.ಅ/ದಾ.ವಿ/ಆ.ಮ/45/2020-21, ದಿನಾಂಕ: 13-01-2022

****

ಈ ಮೇಲಿನ ವಿಷಯದಲ್ಲಿ ತಿಳಿಸಿರುವ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ/ದಾಸರಹಳ್ಳಿ/ಪೀ.ಕೈ.ಪ್ರ/ಹೆಗ್ಗನಹಳ್ಳಿ ಉಪ ವಿಭಾಗರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಕೋರಿರುವ ಮೇರೆಗೆ, ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಸದರಿ ಕಾಮಗಾರಿಗೆ 2018-19 ನೇ ಸಾಲಿನ ದರಪಟ್ಟಿಯಂತೆ ಅಂದಾಜು ಮೊತ್ತ ರೂ.20.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ಉಲ್ಲೇಖ(1) ರ ಅನ್ವಯ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ ಮತ್ತು ತಾಂತ್ರಿಕ ಮಂಜೂರಾತಿಯ ಪುಸ್ತಕದ ಪುಟ ಸಂಖ್ಯೆ:52 ಕ್ರಮ ಸಂಖ್ಯೆ: 45 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1 ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2 ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.
3 ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4 ರಸ್ತೆ ಇತಿಹಾಸ ಪುಸ್ತಕದಲ್ಲಿ ಸದರಿ ಕಾಮಗಾರಿಯಲ್ಲಿನ ವಿವಿಧ ಕೆಲಸಗಳ ವಿವರಗಳನ್ನು ನಮೂದಿಸುವುದು.

ಕಾರ್ಯಪಾಲಕ ಅಭಿಯಂತರರು,
ದಾಸರಹಳ್ಳಿ ವಿಭಾಗ,
ಬಿಬಿಎಂಪಿ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:-
1 ಸಹಾಯಕ ಕಾರ್ಯಪಾಲಕ ಅಭಿಯಂತರರು, (ಶೆಟ್ಟಿಹಳ್ಳಿ, ಟಿ.ದಾಸರಹಳ್ಳಿ, ಪೀಣ್ಯ ಕೈಗಾರಿಕಾ ಪ್ರದೇಶ ಮತ್ತು ಹೆಗ್ಗನಹಳ್ಳಿ) ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ಬೆಂಗಳೂರು. ಮೂಲ ಅಂದಾಜು ಪಟ್ಟಿಯೊಂದಿಗೆ ಮುಂದಿನ ಕ್ರಮಕ್ಕಾಗಿ.
2 ಸಹಾಯಕ ಹಣಕಾಸು ನಿಯಂತ್ರಕರು, ದಾಸರಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3 ಕಛೇರಿ ಪ್ರತಿ.